

ಆ ಮನೆಯಲ್ಲೊಂದು ಸಾವು ಸಂಭವಿಸಿತ್ತು. ಸತ್ತ ವ್ಯಕ್ತಿಯ ಅಂತಿಮ ದರ್ಶನ ಪಡೆಯಲು ಜನ ಬರುತ್ತಿದ್ದರು. ಆದರೂ ಅಲ್ಲಿ ಸ್ಮಶಾನಮೌನ ಆವರಿಸಿತ್ತು.

ಅಂತಿಮ ದರ್ಶನ ಪಡೆಯಲು ಬರುವವರಲ್ಲಿ ಗಂಧದ ಮಾಲೆಯಿತ್ತು. ಕೆಲವರಲ್ಲಿ ಗುಲಾಬಿ ಹೂ. ಇನ್ನು ಕೆಲವರು ಗಂಧದ ಕಡ್ಡಿ ತಂದರೆ ಮತ್ತೆ ಕೆಲವರಲ್ಲಿ ಮೇಣದ ಬತ್ತಿ ಇತ್ತು. ಏನು ಕೊಂಡು ಹೋಗಬೇಕೆಂದು ಗೊಂದಲದಲ್ಲಿದ್ದವರು ಖಾಲಿ ಕೈಯಲ್ಲಿ ಬರುತ್ತಿದ್ದರು.

ಸತ್ತವರು ಕ್ರಾಸ್ತಾ ಟೀಚರ್.

ಪಾರ್ಥಿವ ಶರೀರದ ತಲೆಯ ಬಲಬದಿಯಲ್ಲಿ ಕ್ರಾಸ್ತಾ ಟೀಚರ ಮಗ ಒಂದು ಹರಿವಾಣದಲ್ಲಿ ಬೆಳ್ತಿಗೆ ಅಕ್ಕಿ ಹಾಕಿ ಅದಕ್ಕೆ ನೀರು ಸುರಿದು ತುಳಸಿ ಎಲೆಯನ್ನು ಇರಿಸಿದ್ದ.

ಅಂತಿಮ ದರ್ಶನ ಪಡೆಯ ಬಂದವರು ತುಳಸಿ ಎಲೆಯನ್ನು ನೀರಲ್ಲಿ ಮುಳುಗಿಸಿ ಆ ನೀರನ್ನು ಕ್ರಾಸ್ತಾ ಟೀಚರ್ ತುಟಿಗೆ ಸವರುತ್ತಿದ್ದರು.

ನಿನ್ನೆ ರಾತ್ರಿಯೇ ತೀರಿಹೋಗಿದ್ದ ಕ್ರಾಸ್ತಾ ಟೀಚರ್ ತುಟಿಗಳಿಂದ ಆ ನೀರು ಕೆಳಗಿಳಿದು ಹೋಗುತ್ತಿತ್ತು.

ಕ್ರಾಸ್ತಾ ಟೀಚರಿಗೆ ತುಳಸಿ ಜಲವೆ? ಎಂದು ಕೆಲವರು ಆಕ್ಷೇಪಿಸುತ್ತಿದ್ದರು; ಮನಸ್ಸಿನಲ್ಲಿ! ಯಾರಿಗೂ ಗಟ್ಟಿಯಾಗಿ ಏನನ್ನೂ ಹೇಳಲು ಮನಸ್ಸಿಲ್ಲ.

ಕ್ರಾಸ್ತಾ ಟೀಚರ ಮಗಳು ಸುಮ್ಮನೆ ಕುಳಿತು ಆಕಾಶದತ್ತ ನೋಡುತ್ತಿದ್ದಳು. ಅವಳು ಚಿಕ್ಕವಳಿರುವಾಗ ತಾಯಿಯಲ್ಲಿ ಕೇಳಿದ್ದಳು.

'ಆಕಾಶದಲ್ಲಿ ಇಷ್ಟೊಂದು ನಕ್ಷತ್ರಗಳು ಇರುವುದೇಕಮ್ಮಾ?'

'ಸತ್ತವರು ನಕ್ಷತ್ರಗಳಾಗಿ ಭೂಮಿಯಲ್ಲಿ ತಮ್ಮವರು ಏನು ಮಾಡುತ್ತಾರೆ ಎಂದು ನೋಡುತ್ತಿರುತ್ತಾರೆ ಮಗಳೇ.'

'ಜನರು ಯಾಕೆ ಸಾಯುತ್ತಾರಮ್ಮಾ?'

'ಆಯುಸ್ಸು ತೀರಿದವರು ಸಾಯಲೇಬೇಕು. ನಾನೂ ಒಂದು ದಿನ ಸತ್ತು ಹೋಗುತ್ತೀನಿ. ಆಮೇಲೆ ದಿನಾ ನೀನು ಆಕಾಶ ನೋಡು. ನಿನಗೆ ನಾನು ನಕ್ಷತ್ರವಾಗಿ ಕಾಣುತ್ತೀನಿ.'

ಮಗಳು ತಾಯಿಯನ್ನು ಗಟ್ಟಿಯಾಗಿ ಅಪ್ಪಿಕೊಂಡಳು. 'ನೀನು ಸತ್ತು ಹೋಗಬಾರದಮ್ಮಾ, ನೀನೇ ಹೋದರೆ ನನಗ್ಯಾರಿದ್ದಾರೆ?'

'ಆಗ ನಮ್ಮ ಪುಟ್ಟನಿಗೆ ಮದುವೆಯಾಗಿ ಗಂಡ ಇರುತ್ತಾನೆ. ನಿನಗಿಂತಲೂ ಮುದ್ದಾದ ಒಂದು ಹೆಣ್ಣು ಮಗುವಿರುತ್ತದೆ. ನಿನ್ನ ಅದೃಷ್ಟ ನೆಟ್ಟಗಿದ್ದರೆ ಅಪ್ಪ ಇರುತ್ತಾರೆ. ನಿನ್ನ ಅಣ್ಣನಂತೂ ಇದ್ದೇ ಇರುತ್ತಾನೆ.'

ಮಗಳಿಗೆ ಈಗ ಮದುವೆಯಾಗಿದೆ. ಚೆಲುವಿನ ಹೆಣ್ಣು ಮಗು ಕೂಡಾ ಹುಟ್ಟಿದೆ. ಕ್ರಾಸ್ತಾ ಟೀಚರು ಎಲ್ಲರನ್ನೂ ಬಿಟ್ಟು ಹೊರಟು ಹೋಗಿದ್ದಾರೆ. ಮಗಳಿಗೆ ಈಗ ಸೂರ್ಯ, ಚಂದ್ರ, ನಕ್ಷತ್ರ ಎಂದರೇನೆಂದು ಗೊತ್ತಿದೆ. ಆದರೆ ನಿನ್ನೆ ರಾತ್ರಿ ಅಮ್ಮ ತೀರಿಕೊಂಡಾಗ ಅವಳು ಮಾಡಿದ ಮೊದಲ ಕೆಲಸವೆಂದರೆ ವಿಶಾಲಾಕಾಶದಲ್ಲಿ ಮಿನುಗುವ ನಕ್ಷತ್ರಗಳ ನಡುವೆ ಅಮ್ಮ ಕಾಣಿಸುತ್ತಾಳೆಯೋ ಎಂದು ನೋಡಿದ್ದು.

ಮಗ, ಮಗಳು ಕೆಲಸ ಸಿಕ್ಕಿ ಪಟ್ಟಣ ಸೇರಿದ ಮೇಲೆ ಆ ದೊಡ್ಡ ಮನೆಯಲ್ಲಿ ಮೌನ ಆವರಿಸಿತ್ತು. ಮಗಳಿಗೊಬ್ಬ ಮಗಳಾದಾಗ ಸಮೃದ್ಧ ನಗು ತುಂಬಿತ್ತು.

ಕ್ರಾಸ್ತಾ ಟೀಚರು 'ಅತ್ತಿತ್ತ ನೋಡದಿರು, ಅತ್ತು ಹೊರಳಾಡಿದರು' ಎಂದು ಜೋಗುಳ ಹಾಡಿ ಮೊಮ್ಮಗಳನ್ನು ನಿದ್ದೆ ಮಾಡಿಸುತ್ತಿದ್ದರು. ದೀಪಕ್‌ರಾಜ್ ಮೇಸ್ತ್ರ ಬತ್ತಳಿಕೆಯಲ್ಲಿ ದಾಸರ ಕೀರ್ತನೆಗಳು ತುಂಬಿದ್ದವು. ಅವರ ರಾಗ ಹೇಗಿದ್ದರೂ ಮೊಮ್ಮಗಳಿಗೆ ನಿದ್ದೆ ಬರುತ್ತಿತ್ತು! ಅಂಥ ಮೊಮ್ಮಗಳು ತಂದೆ–ತಾಯಿಯೊಡನೆ ದೊಡ್ಡ ಪಟ್ಟಣಕ್ಕೆ ಹೋದಾಗ ಟೀಚರು ಅತ್ತಿದ್ದರು. ಮೇಸ್ತ್ರು ವೇದಾಂತಿಯಂತೆ ಹೇಳಿದ್ದರು: 'ಮಾನವ ಯಾವತ್ತೂ ಒಂಟೀನೆ.' ದೊಡ್ಡ ಮನೆ ಬಿಕೋ ಎನ್ನುವಾಗ ಟೀಚರು– ಮೇಸ್ತ್ರಲ್ಲಿ ಹೇಳುತ್ತಿದ್ದರು. 'ನಮ್ಮ ದಿನಗಳು ಸಮೀಪಿಸುತ್ತಿವೆಯಲ್ಲವೆ?' ಮೇಸ್ತ್ರು ವೇದಾಂತಿಯಂತೆ ನಗುತ್ತಿದ್ದರು.